ದಿನಾಂಕಃ 17-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಬಿ.ಎಲ್ ವಾದಿ ಪರ ವಕೀಲರಿಂದಃ

ನಿಡಿ-2 ರ ಪ್ರಕಾರ ನನ್ನ ಭಾಗಕ್ಕೆ ಬಂದ ಆಸ್ತಿಯ ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯು 30 ಅಡಿ ಅಗಲದ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಲೇಔಟ್ ನ ರಸ್ತೆಯಾಗಿರುತ್ತದೆ. ಶಿವಮ್ಮ ಹಾಗೂ ನಾನು ಒಂದು ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡೆವು ಎಂದರೆ ಸರಿಯಲ್ಲ. ಸದರಿ ರಸ್ತೆಯ ಬದಿಯಲ್ಲಿ ಒಂದು ವಿದ್ಯುತ್ ಕಂಬವಿದೆ ಎಂದರೆ ಸರಿ. ಸದರಿ ವಿದ್ಯುತ್ ಕಂಬದ ಉತ್ತರಕ್ಕೆ ರಸ್ತೆ ಇರುತ್ತದೆ ಹಾಗೂ ಸದರಿ ವಿದ್ಯುತ್ ಕಂಬಂದಿಂದ ನನ್ನ ಮನೆಯ ದಿಕ್ಕಿನಲ್ಲಿ ರಸ್ತೆ ಇರುವುದಿಲ್ಲ ಎಂದರೆ ಗೊತ್ತಿಲ್ಲ. ಈ ಹಂತದಲ್ಲಿ ಸಾಕ್ಷಿಯು ಒಂದು ಛಾಯಾಚಿತ್ರವನ್ನು ನೋಡಿ ಅದರಲ್ಲಿರುವ ರಸ್ತೆಯನ್ನು ಗುರುತಿಸಿದ್ದು ಸದರಿ ಛಾಯಾಚಿತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-11 ರ ಬಲಬದಿಯಲ್ಲಿ ನನ್ನ ಸೈಟ್ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿ ಕಾಣಿಸುವ ನೀಲಿ ಬಣ್ಣದ ಶೆಡ್ ಅನ್ನು ರಸ್ತೆಯ ಬದಿಯವರೆಗೆ ಅಳವಡಿಸಿದ್ದಾರೆ ಎಂದರೆ ಸರಿ. ನನಗೆ ಸೇರಿದ ಸರ್ವೆ ನಂ. 45/17 ರ ಆಸ್ತಿಯು ನಿಡಿ-6 ರ ಆಕಾರ್ ಬಂದ್ ನಲ್ಲಿ ನಮೂದಿಸಿರುವ ಉತ್ತರ ದಿಕ್ಕಿಗಿರುವ ಗೆರೆಯ ಬದಿಯಲ್ಲಿ ಬರುತ್ತದೆ. ನಿಪಿ-11 ರಲ್ಲಿ ಕಾಣಿಸುವ ಕಂಬವು ನಿಡಿ-6 ರಲ್ಲಿ ಉತ್ತರ ದಿಕ್ಕಿಗೆ ತೋರಿಸಿರುವ ಗೆರೆಯ ಬದಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ನಿಪಿ-11 ರ ಬಲ ಬದಿಯಲ್ಲಿ ಕಾಣಿಸುವ ಕಾಂಪೌಂಡ್ ಕಲ್ಲು ಯಾರಿಗೆ ಸೇರಿದ್ದು ಎಂಬುದು ನನಗೆ ಗೊತ್ತಿಲ್ಲ. ಈ ಹಂತದಲ್ಲಿ ಸಾಕ್ಷಿಯು ಒಂದು ಛಾಯಾಚಿತ್ರವನ್ನು ನೋಡಿ ಅದರಲ್ಲಿ ತನ್ನ ಆಸ್ತಿಯನ್ನು ಗುರುತಿಸಿದ ಕಾರಣ ಸದರಿ ಛಾಯಾಚಿತ್ರವನ್ನು ನಿಪಿ-12 ಹಾಗೂ ಅದರಲ್ಲಿ ತನ್ನ ಆಸ್ತಿಯನ್ನು ಸಾಕ್ಷಿಯು ಗುರುತಿಸಿದ ಭಾಗವನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-12 ರಲ್ಲಿ ನನ್ನ ಆಸ್ತಿಯ ಸ್ವಲ್ಪ ಭಾಗ ಮಾತ್ರ ಕಾಣಿಸುತ್ತಿದೆ ಎಂದು ನುಡಿಯುತ್ತಾರೆ. ನಿಪಿ-12 ರಲ್ಲಿ ಕಾಣಿಸುತ್ತಿರುವ ಮಣ್ಣಿನ ದಾರಿಯೇ ನನ್ನ ಜಾಗದ ಉತ್ತರ ದಿಕ್ಕಿಗಿರುವ ರಸ್ತೆಯಾಗಿರುತ್ತದೆ.

ನಿಪಿ-11 ರ ಎಡಬದಿಯಲ್ಲಿ ಕಾಣಿಸುತ್ತಿರುವ ಮನೆಗಳು ಲೇಔಟ್ ನಲ್ಲಿರುವ ಮನೆಗಳು ಎಂದರೆ ಸರಿ. ನನ್ನ ಆಸ್ತಿಯ ಪಕ್ಕದಲ್ಲಿರುವ ರಸ್ತೆಯ ಎರಡೂ ಬದಿಯಲ್ಲಿ ವಿದ್ಯುತ್ ಕಂಬಗಳು ಹಾದುಹೋಗಿವೆ. ನಿಪಿ-11 ರಲ್ಲಿ ಕಾಣಿಸುವ ರಸ್ತೆಯ ಬದಿಯಲ್ಲಿ ಕಾಣಿಸುವ ನೀಲಿ ಬಣ್ಣದ ಶೆಡ್ ನ ನೇರವಾಗಿ ನನ್ನ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ

ಆಸ್ತಿಯು ನಿಪಿ-11ರ ಬಲ ಬದಿಯಲ್ಲಿ ಕಾಣಿಸುವ ಹಳದಿ ಬಣ್ಣದ ಕಲ್ಲಿನಿಂದ ಪ್ರಾರಂಭವಾಗುತ್ತದೆ ಎಂದು ನುಡಿಯುತ್ತಾರೆ. ನಿಪಿ-11ರಲ್ಲಿ ಕಾಣಿಸುವ ರಸ್ತೆ ಹಾಗೂ ಅದರ ಬಲ ಬದಿಯಲ್ಲಿ ಕಾಣಿಸುವ ಹಳದಿ ಬಣ್ಣದ ಕಲ್ಲಿನ ಮಧ್ಯೆ ಇರುವ ಆಸ್ತಿಯು ಯಾರಿಗೆ ಸೇರಿದ್ದು ಎಂಬ ಪ್ರಶ್ನೆಗೆ ಸಾಕ್ಷಿ ಅದು ಲೇಔಟ್ ಗೆ ಸೇರಿರಬಹುದು ಎಂದು ನುಡಿಯುತ್ತಾರೆ.

ನಿಪಿ-12ರಲ್ಲಿ ಕಾಣಿಸುವ ರಸ್ತೆ ಹಾಗೂ ನಾನು ಅಳವಡಿಸಿರುವ ಪಾಯದ ಮಧ್ಯೆ ಎಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ. ಸದರಿ ರಸ್ತೆ ಹಾಗೂ ನನ್ನ ಜಾಗದಲ್ಲಿ ನಿರ್ಮಿಸಿರುವ ಪಾಯದ ಮಧ್ಯೆ ಬರುವ ಜಾಗದ ಅಳತೆಯನ್ನು ನಾನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಳತೆಯಾದ ನಂತರ ನನ್ನ 2 1/2 ಜಮೀನಿನಲ್ಲಿ ಪಾಯ ಹಾಕಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮೂಲಕ ನಡೆದ ಅಳತೆ ಕಾರ್ಯವು ಸರಿಯಾಗಿರುತ್ತದೆ. ನ್ಯಾಯಾಲಯದ ಮೂಲಕ ನಡೆದ ಅಳತೆ ಕಾರ್ಯದ ಸಮಯದಲ್ಲಿ ನಾನು ಹಾಜರಿದ್ದು ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ನೆನಪಿಲ್ಲ. ನಿಡಿ-6 ರಲ್ಲಿ ಉತ್ತರ ದಿಕ್ಕಿಗೆ ತೋರಿಸಿರುವ ಕಲ್ಲಿನಿಂದ ಮುಂದೆಗೆ ನಿಪಿ-11ರಲ್ಲಿ ಕಾಣಿಸುವ ನೀಲಿ ಬಣ್ಣದ ಶೆಡ್ ಅನ್ನು ನಿರ್ಮಿಸಿದ್ದಾರೆ.

ನನ್ನ 2 1/2 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಅಳತೆ ಮಾಡಿ ಸ್ಕೆಚ್ ಅನ್ನು ನೀಡಿರುತ್ತಾರೆ. ನಿಡಿ-6ರ ದಾಖಲೆಯೇ ಸದರಿ ಪ್ರತ್ಯೇಕವಾದ ಅಳತೆ ಮತ್ತು ಸ್ಕೆಚ್ ನ ದಾಖಲೆಯಾಗಿರುತ್ತದೆ. ಜಮೀನನ್ನು ನಾನು ಕೊಂಡುಕೊಂಡು ಅದು ನನ್ನ ಹೆಸರಿಗೆ ಬಂದ ನಂತರ ನಿಡಿ-6ರ ಸ್ಕೆಚ್ ಅನ್ನು ಮಾಡಿಸಿರುತ್ತೇನೆ. ನನ್ನ 2 1/2 ಗುಂಟೆ ಆಸ್ತಿಯ ಹದ್ದುಬಸ್ತು ಮಾಡಿಕೊಡಿ ಎಂದು ಸಲ್ಲಿಸಿದ್ದೇನೆ ಎಂದು ಹೇಳುವ ಅರ್ಜಿಯು ನಿಡಿ-1 ರಿಂದ 17ರ ಪೈಕಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-6 ರಿಂದ 11ರ ದಾಖಲೆಗಳೆಲ್ಲವೂ ನಾನು ಜಾಗವನ್ನು ಕೊಂಡುಕೊಳ್ಳುವ ಮುಂಚಿತವಾಗಿ ತಯಾರಿಸಲ್ಪಟ್ಟ ದಾಖಲೆಗಳು ಎಂದರೆ ಸರಿಯಲ್ಲ.

ವಾದಿ ಹಾಗೂ ನಾನು ಸರ್ವೆ ನಂ.45ರಲ್ಲಿ ಆಸ್ತಿಗಳನ್ನು ಕೊಂಡುಕೊಂಡಿದ್ದೇವೆ ಎಂದರೆ ಸರಿ. ನನ್ನ ಆಸ್ತಿಯ ಉತ್ತರ ದಿಕ್ಕಿಗೆ 20 ಅಡಿ ಅಗಲದ ರಸ್ತೆ ಇರುತ್ತದೆ ವಿನಃ 30 ಅಡಿ ಅಗಲದ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯಿಂದ 10 ಅಡಿ ಜಾಗವನ್ನು ಬಿಟ್ಟು ನಾನು ಪಾಯವನ್ನು ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಾಗ ಎಲ್ಲಿ ಬರುತ್ತದೆ ಎಂದು ನನಗೆ ನಿಖರವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಪಾಯ ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು

ನಾನು ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಿಸಿದ ಕಾರಣ ವಾದಿಯು ನನ್ನ ವಿರುದ್ಧ ಎರಡು ಬಾರಿ ದೂರುಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ಒತ್ತುವರಿ ಮಾಡಿಲ್ಲದಿದ್ದರೂ ಶಿವಮ್ಮನ ಮಾತನ್ನು ಕೇಳಿ ವಾದಿಯು ಸುಳ್ಳು ದೂರನ್ನು ನೀಡಿದರು ಎಂದು ನುಡಿಯುತ್ತಾರೆ. ನನ್ನ ಮತ್ತು ವಾದಿಯ ಆಸ್ತಿಯು ಎಲ್ಲಿ ಬರುತ್ತದೆ ಎಂದು ಇಲ್ಲಿಯವರೆಗೆ ನಾನು ಹದ್ದುಬಸ್ತನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನನ್ನ ಆಸ್ತಿಯ ವಿಸ್ತೀರ್ಣವನ್ನು ಮೀರಿ ಮನೆ ಕಟ್ಟಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಉತ್ತರ ದಿಕ್ಕಿಗೆ ಮತ್ತು ಪೂರ್ವ ದಿಕ್ಕಿಗೆ ಜಾಗವನ್ನು ಬಿಟ್ಟು ವಾದಿಯ ಆಸ್ತಿಯಲ್ಲಿ ಮನೆಯನ್ನು ಕಟ್ಟಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಒತ್ತುವರಿಯ ವಿಚಾರವಾಗಿಯೇ ವಾದಿ ಹಾಗೂ ನನ್ನ ಮಧ್ಯೆ ಗಲಾಟೆ ನಡೆಯಿತು ಎಂದರೆ ಸಾಕ್ಷಿ ಯಾವುದೇ ಒತ್ತುವರಿಯಾಗಿಲ್ಲ ಎಂಬುದು ವಾದಿಗೆ ತಿಳಿದಿದ್ದರೂ ಶಿವಮ್ಮನ ಮಾತು ಕೇಳಿಕೊಂಡು ಈ ದಾವೆಯನ್ನು ಹೂಡಿದರು ಎಂದು ನುಡಿಯುತ್ತಾರೆ. ಇದೇ ವಿಚಾರವಾಗಿ ನಾನು ಮತ್ತು ನನ್ನ ಯಜಮಾನರು ವಾದಿಗೆ ಹೊಡದೆ ಕಾರಣ ನಮ್ಮ ಮೇಲೆ ದೂರು ದಾಖಲಾಗಿದೆ ಎಂದರೆ ಸಾಕ್ಷಿ ಸದರಿ ಗಲಾಟೆಯು ಹಣಕಾಸಿನ ವಿಚಾರಕ್ಕೆ ಸಂಬಂಧಪಟ್ಟಂತೆ ನಡೆದಿರುತ್ತದೆ ಹಾಗೂ ವಾದಿಯೇ ನಮಗೆ ಹೊಡೆದರೂ ನಮ್ಮ ಮೇಲೆ ಸುಳ್ಳು ದೂರನ್ನು ನೀಡಿದರು ಎಂದು ನುಡಿಯುತ್ತಾರೆ. ವಾದಿಗೆ ತೊಂದರೆ ನೀಡಲು ಈ ದಾವೆಯಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು